MARCH 02, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಇಸ್ರೇಲ್ ಹಾಗೂ ಇರಾನ್ ಸಂಘರ್ಷ;** ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳಿಂದ, ಕನ್ನಡಿಗರನ್ನು ಕರೆತರಲು, ರಾಜ್ಯ ಸರ್ಕಾರದಿಂದ, ಕ್ರಮ.
- **2ನೇ ಆವೃತ್ತಿಯ, ಸಂಪೂರ್ಣತಾ ಅಭಿಯಾನ;** ಕಲಬುರಗಿ ಜಿಲ್ಲೆಯ, ಮೂರು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಮುಂದುವರಿಕೆ.
- **ಮತದಾರರ ಪಟ್ಟಿಯ ವಿಶೇಷ ತೀವ್ರ** ಪರಿಷ್ಕರಣೆ; ಇಂದಿನಿಂದ 5ನೇ ತಾರೀಖಿನ ವರೆಗೆ, ಪೂರ್ವಸಿದ್ಧತಾ ಮ್ಯಾಪಿಂಗ್ ಕಾರ್ಯ.
- **ಕಲಬುರಗಿ ಐ.ಟಿ.ಎಫ್.** ಮಹಿಳಾ ಟೆನಿಸ್ ಪಂದ್ಯಾವಳಿ; 12 ಭಾರತೀಯ ಟೆನಿಸ್ ಆಟಗಾರ್ತಿಯರು, ಅಂತಿಮ ಸುತ್ತಿಗೆ ಆಯ್ಕೆ.

<><><>

**ಈಗ ವಾರ್ತೆಗಳ ವಿವರ**

<><><>

**ಇಸ್ರೇಲ್ ಹಾಗೂ ಇರಾನ್ ಸಂಘರ್ಷದ ಹಿನ್ನೆಲೆ,** ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳು, ನಾಗರಿಕ ವಿಮಾನಯಾನ ಸೇವೆಯನ್ನು ಇಂದಿನ ವರೆಗೆ ಸ್ಥಗಿತಗೊಳಿಸಿ, ಮುನ್ನೆಚ್ಚರಿಕೆ ಕ್ರಮ ಕೈಗೊಂಡಿವೆ. ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ನೀಡಿರುವ ಮಾಹಿತಿ ಪ್ರಕಾರ, ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ, ಬಹ್ರೇನ್, ಓಮಾನ್, ಇರಾಕ್, ಜೋರ್ಡಾನ್, ಕುವೈತ್, ಯು.ಎ.ಇ. ಹಾಗೂ ಕತಾರ್‌ಗೆ, ಅಂತಾರಾಷ್ಟ್ರೀಯ ವಿಮಾನಯಾನ ಸೇವೆಯನ್ನು, ಸ್ಥಗಿತಗೊಳಿಸಲಾಗಿದೆ. ಈ ಹಿನ್ನೆಲೆ, ಕರ್ನಾಟಕ ಸೇರಿದಂತೆ, ದೇಶದ ಹಲವು ಭಾಗಗಳ ಪ್ರಯಾಣಿಕರು, ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ಸಿಲುಕಿದ್ದಾರೆ.

<><><>

**‘ಮುಖ್ಯಮಂತ್ರಿ ಹಾಗೂ ಕಂದಾಯ ಖಾತೆ ಸಚಿವರ** ನಿರ್ದೇಶನದಂತೆ, ರಾಜ್ಯ ತುರ್ತು ಸೇವಾ ಕೇಂದ್ರ ಹಾಗೂ ಜಿಲ್ಲಾ ತುರ್ತು ಸೇವಾ ಕೇಂದ್ರಗಳು, ದಿನದ 24 ಗಂಟೆ ಕಾರ್ಯ ನಿರ್ವಹಿಸುತ್ತಿದ್ದು, ಭಾರತೀಯರನ್ನು ಸುರಕ್ಷಿತವಾಗಿ ಮರಳಿ ಸ್ವದೇಶಕ್ಕೆ ಕರೆತರಲು, ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು, ಪರಿಹಾರ ಕಾರ್ಯಾಚರಣೆ ಆಯುಕ್ತ, ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

<><><>

**ಹೊಸ ದಿಲ್ಲಿಯ ಕರ್ನಾಟಕ ಭವನದ,** ನಿವಾಸಿ ಆಯುಕ್ತರು, ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹಾಗೂ ಯುದ್ಧಗ್ರಸ್ಥ ಮಧ್ಯಪ್ರಾಚ್ಯ ರಾಷ್ಟ್ರಗಳ ರಾಯಬಾರ ಕಚೇರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಜಿಲ್ಲಾವಾರು ಸಹಾಯವಾಣಿ ಮೂಲಕ, ಸೂಕ್ತ ಮಾಹಿತಿ, ಸಂಯೋಜನೆ ಹಾಗೂ ಕನ್ನಡಿಗರ ರಕ್ಷಣೆಗೆ ಆದ್ಯತೆ ನೀಡಲಾಗಿದೆ ಎಂದಿದ್ದಾರೆ.

<><><>

**ಹೆಚ್ಚಿನ ಮಾಹಿಫಳ್ಳು,** ರಾಜ್ಯ ತುರ್ತು ಸ್ಪಂದನೆ ದೂರವಾಣಿ: 080–22340676 ಅಥವಾ ಸಂಚಾರ ಸಾರಥಿಯಲ್ಲಿ ಹೆಸರು ನೋಂದಾಯಿಸಬಹುದು.

<><><>

**ಕೇಂದ್ರ ಪುರಸ್ಕೃತ, ಸಂಪೂರ್ಣತಾ ಅಭಿಯಾನದ 2ನೇ ಆವೃತ್ತಿಗೆ,** ಕಳೆದ ಜನವರಿ 28 ರಂದು, ಕಲಬುರಗಿ ಜಿಲ್ಲೆಯ, ಮೂರು ಮಹತ್ವಾಕಾಂಕ್ಷಿ ತಾಲೂಕುಗಳಾದ, ಕಾಳಗಿ, ಅಫಜಲಪುರ ಹಾಗೂ ಶಹಬಾದನಲ್ಲಿ, ಚಾಲನೆ ನೀಡಲಾಗಿದೆ. ಆರೋಗ್ಯ, ಪೌಷ್ಟಿಕತೆ ಖಾತ್ರಿ, ಕೃಷಿ ಹಾಗೂ ಶಿಕ್ಷಣ ಮುಂತಾದ ಮಹತ್ವದ ಕ್ಷೇತ್ರಗಳಲ್ಲಿ, ಕಲ್ಯಾಣ ಕರ್ನಾಟಕದ, ಹಿಂದುಳಿದ ಪ್ರದೇಶಗಳನ್ನು, ನಿಗದಿತ ಮಾನದಂಡಗಳಡಿ, ಅಭಿವೃದ್ಧಿ ಪಡಿಸಲು, ಕೇಂದ್ರ ನೀತಿ ಆಯೋಗ, ಸಂಪೂರ್ಣತಾ ಅಭಿಯಾನ, ಆರಂಭಿಸಿದೆ.

<><><>

**ಈ ಕುರಿತು ಒಂದು ವರದಿ..**

<><><>

***ಕೇಂದ್ರದ ನೀತಿ ಆಯೋಗ, ದೇಶದ 112 ಮಹತ್ವಕಾಂಕ್ಷಿಜಿಲ್ಲೆಗಳು ಹಾಗೂ 500 ತಾಲೂಕು ಮಟ್ಟದ ಮಹತ್ವಾಕಾಂಕ್ಷಿ ಘಟಕಗಳಲ್ಲಿ, ಆರೋಗ್ಯ, ಕೃಷಿ, ಶಿಕ್ಷಣ ಸೇರಿದಂತೆ, ಒಟ್ಟು ಐದು ವಲಯಗಳಲ್ಲಿ, ವಿವಿಧ ಮಾನದಂಡಗಳಡಿ, ಶೇಕಡ 100 ರಷ್ಟು ಗುರಿ ಸಾಧಿಸುವ ಬದ್ಧತೆಯೊಂದಿಗೆ, ಎರಡನೇ ಆವೃತ್ತಿಯ, ಸಂಪೂರ್ಣತಾ ಅಭಿಯಾನ ಆರಂಭಿಸಿದೆ. ದೇಶದಲ್ಲಿ ನಿಗದಿತ ಅಭಿವೃದ್ಧಿ ಮಾನದಂಡಗಳ ಆಧಾರದಲ್ಲಿ, ಹಿಂದುಳಿದ ಜಿಲ್ಲೆ ಹಾಗೂ ತಾಲೂಕುಗಳಲ್ಲಿ, ಮಹತ್ವಾಕಾಂಕ್ಷಿ ಯೋಜನೆಗಳಾದ, ಆರೋಗ್ಯ, ಅಪೌಷ್ಟಿಕತೆ ನಿವಾರಣೆ, ಗರ್ಭಿಣಿಯರು, ಹೆರಿಗೆ ಸಂದರ್ಭದಲ್ಲಿ ತಾಯಂದಿರು, ಹಾಗೂ ನವಜಾತ ಶಿಶುಗಳ ಮರಣ ಪ್ರಮಾಣ, ಶೂನ್ಯಕ್ಕೆ ತರುವುದು, ಸಂಪೂರ್ಣತಾ ಅಭಿಯಾನದ ಮುಖ್ಯ ಉದ್ದೇಶ. ಕಲಬುರಗಿ ಜಿಲ್ಲೆಯ, ಮಹತ್ವಾಕಾಂಕ್ಷಿ ತಾಲೂಕುಗಳಾದ, ಕಾಳಗಿ, ಅಫಜಲಪುರ ಹಾಗೂ ಶಹಬಾದನಲ್ಲಿ, ಪ್ರಸ್ತುತ ಸಂಪೂರ್ಣತಾ ಅಭಿಯಾನ ಮುಂದುವರೆದಿದೆ.***

***ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಂಪೂರ್ಣತಾ ಅಭಿಯಾನದ ಫೆಲೋ, ಶಿವರಾಜ ಹೋಳ್ಕರ.***

<><><>

**ವಿವೇಕ (56) + ಶಿವರಾಜ ಹೋಳ್ಕರ ಧ್ವನಿ (72) ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಮತದಾರರ ಪಟ್ಟಿಯ ವಿಶೇಷ ತೀವ್ರ** ಪರಿಷ್ಕರಣೆಯ, ಪೂರ್ವಸಿದ್ಧತೆಯ ಭಾಗವಾಗಿ, 2012ರ ಮತದಾರರ ಪಟ್ಟಿಗೆ, 2025ರ ಮತದಾರರ ಪಟ್ಟಿಯ, ಮ್ಯಾಪಿಂಗ್ ಕಾರ್ಯ, ಇಂದಿನಿಂದ 5ನೇ ತಾರೀಖಿನ ವರೆಗೆ, ಬೆಳಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ, ಕಲಬುರ್ಗಿ ಜಿಲ್ಲೆಯಾದ್ಯಂತ, ನಡೆಯಲಿದೆ. ಭಾರತ ಚುನಾವಣಾ ಆಯೋಗ, ರಾಜ್ಯದಲ್ಲಿ, ಬರುವ ಏಪ್ರಿಲ್ ತಿಂಗಳಲ್ಲಿ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ನಡೆಸಲು ಉದ್ದೇಶಿಸಿದ್ದು, ರಾಜ್ಯ ಮುಖ್ಯ ಚುನಾವಣಾಧಿಕಾರಿ ನಿರ್ದೇಶನದಂತೆ, ಕಲಬುರ್ಗಿ ಜಿಲ್ಲೆಯ 9 ವಿಧಾನಸಭಾ ಮತಕ್ಷೇತ್ರಗಳ ಮತದಾರರ ಪಟ್ಟಿಯ, ಮ್ಯಾಪಿಂಗ್ ಕಾರ್ಯ, ಮಾಡಲಾಗುತ್ತಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ, ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

**ಧಾರವಾಡದಲ್ಲೂ ಮತದಾರರ** ಪಟ್ಟಿಯ, ವಿಶೇಷ ತೀವ್ರ ಪರಿಷ್ಕರಣೆ, ಪೂರ್ವಸಿದ್ಧತೆಯ ಭಾಗವಾಗಿ, ಮ್ಯಾಪಿಂಗ್ ಕಾರ್ಯ ನಡೆಯುತ್ತಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿ–ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ, 164ನೇ ಮತಗಟ್ಟೆಯ ಅಧಿಕಾರಿ ವಿಜಯಕುಮಾರ ಗೋವಿಂದಣ್ಣವರ.

<><><>

**ವಿಜಯಕುಮಾರ ಗೋವಿಂದಣ್ಣವರ ಧ್ವನಿ 60 ಸೆಕೆಂದುಗಳು**

<><><>

**ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಹಿತದೃಷ್ಟಿಯಿಂದ,** ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ, ನಿತ್ಯ ಸಂಜೆ, ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ; ತರಗತಿಗಳ ನಂತರ ವಿದ್ಯಾರ್ಥಿಗಳು, ಸಕಾಲದಲ್ಲಿ ಸುರಕ್ಷಿತವಾಗಿ ಮನೆಗೆ ಹಿಂದಿರುಗುವ ಬಗ್ಗೆ, ಪೋಷಕರು ಗಮನಹರಿಸಬೇಕು ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ, ಮನವಿ ಮಾಡಿದ್ದಾರೆ. ಶಿವಮೊಗ್ಗದಲ್ಲಿ ಮಾತನಾಡಿದ ಸಚಿವರು, ಕರ್ನಾಟಕ ಪಬ್ಲಿಕ್ ಶಾಲೆಗಳ ಉದ್ಘಾಟನೆಯ, ರಾಜ್ಯ ಮಟ್ಟದ ಕಾರ್ಯಕ್ರಮವನ್ನು, ಬಜೆಟ್ ಅಧಿವೇಶನದ ಬಳಿಕ, ಶಿವಮೊಗ್ಗದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. 1995ರ ಬಳಿಕ, ರಾಜ್ಯದಲ್ಲಿ ಆರಂಭಗೊಂಡ ಖಾಸಗಿ ಕನ್ನಡ ಶಾಲೆಗಳನ್ನು, ಅನುದಾನಕ್ಕೆ ಒಳಪಡಿಸುವ ಬಗ್ಗೆ, ಪ್ರಸಕ್ತ ಮುಂಗಡ ಪತ್ರದಲ್ಲಿ ಪ್ರಾವಧಾನ ಕಲ್ಪಿಸಲು, ಮುಖ್ಯಮಂತ್ರಿಯವರೊಂದಿಗೆ ಸಮಾಲೋಚಿಸಿದ್ದಾಗಿ, ತಿಳಿಸಿದರು. ಶರಾವತಿ ಮುಳುಗಡೆ ಸಂತ್ರಸ್ತರ ಸಮಸ್ಯೆಗೆ, ಶಾಶ್ವತ ಪರಿಹಾರ ಕಂಡುಕೊಳ್ಳಲು, ರಾಜ್ಯ ಸರ್ಕಾರ ಯೋಜಿಸಿದೆ ಎಂದರು.

<><><>

**'ಬೌದ್ಧಿಕ ಆಸ್ತಿ' ಸೃಷ್ಟಿಸುವವರಿಗೆ,** ರಾಜ್ಯ ಸರ್ಕಾರ50 ಲಕ್ಷ ರೂಪಾಯಿ ಅನುದಾನ ನೀಡುತ್ತಿದೆ; ರಾಜ್ಯಾದ್ಯಂತ *'ಕ್ರಿಯೇಟಿವ್ ಕ್ಲಸ್ಟರ್'* ನಿರ್ಮಿಸಿ, ಸೃಜನಶೀಲತೆ ಉತ್ತೇಜಿಸಲಿದೆ ಎಂದು, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ, 7ನೇ ಆವೃತ್ತಿಯ ಗ್ರ್ಯಾಫೆಕ್ಸ್ ಸಮಾರೋಪ ಸಮಾರಂಭದಲ್ಲಿ, ಅವರು ಮಾತನಾಡಿದರು. ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ.ಸುಧಾಕರ ಮಾತನಾಡಿ, ಬೆಂಗಳೂರು ಗ್ರ್ಯಾಫೆಕ್ಸ್ ಸಮಾವೇಶದಿಂದ, ಕೃತಕ ಬುದ್ಧಿಮತ್ತೆಯ ಬಳಕೆಯಿಂದ ಉದ್ಯೋಗಾವಕಾಶಗಳು ನಷ್ಟವಾಗುವ ಆತಂಕ, ದೂರವಾಗಿದೆ. 7 ಸ್ಟುಡಿಯೋಗಳ 10 ಬೌದ್ಧಿಕ ಆಸ್ತಿ ಅನಾವರಣ, ಇದಕ್ಕೆ ಪುಷ್ಟಿ ನೀಡಿದೆ, ಎಂದರು.

<><><>

**ಕಲಬುರಗಿಯ, ಚಂದ್ರಶೇಖರ ಪಾಟೀಲ** ಕ್ರೀಡಾಂಗಣದಲ್ಲಿ ಆರಂಭಗೊಂಡ,ಕಲಬುರಗಿ ಐ.ಟಿ.ಎಫ್. ಅಂತಾರಾಷ್ಟ್ರೀಯ ಮುಕ್ತ ಮಹಿಳಾ ಟೆನಿಸ್ ಪಂದ್ಯಾವಳಿಯ ಅರ್ಹತಾ ಸುತ್ತಿನಲ್ಲಿ, 12 ಭಾರತೀಯ ಟೆನಿಸ್ ಆಟಗಾರ್ತಿಯರು, ಉತ್ತಮ ಪ್ರದರ್ಶನ ನೀಡಿ, ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದಾರೆ. ವಂಶಿತಾ ಪಠಾನಿಯಾ, ಸ್ನಿಗ್ಧಾ ಕಾಂತಾ, ಸೌಮ್ಯಾ, ಕಶಿಶ್ ಭಾಟಿಯಾ ಎರಡನೇ ಸುತ್ತು ಪ್ರವೇಶಿಸಿದ್ದಾರೆ. ಇಂದು ಪ್ರಧಾನ ಸುತ್ತಿನ ಪಂದ್ಯಗಳು ಆರಂಭಗೊಳ್ಳಲಿವೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಇಸ್ರೇಲ್ ಹಾಗೂ ಇರಾನ್ ಸಂಘರ್ಷ;** ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳಿಂದ, ಕನ್ನಡಿಗರನ್ನು ಕರೆತರಲು, ರಾಜ್ಯ ಸರ್ಕಾರದಿಂದ, ಕ್ರಮ.
- **2ನೇ ಆವೃತ್ತಿಯ, ಸಂಪೂರ್ಣತಾ ಅಭಿಯಾನ;** ಕಲಬುರಗಿ ಜಿಲ್ಲೆಯ, ಮೂರು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಮುಂದುವರಿಕೆ.
- **ಮತದಾರರ ಪಟ್ಟಿಯ ವಿಶೇಷ ತೀವ್ರ** ಪರಿಷ್ಕರಣೆ; ಇಂದಿನಿಂದ 5ನೇ ತಾರೀಖಿನ ವರೆಗೆ, ಪೂರ್ವಸಿದ್ಧತಾ ಮ್ಯಾಪಿಂಗ್ ಕಾರ್ಯ.
- **ಕಲಬುರಗಿ ಐ.ಟಿ.ಎಫ್.** ಮಹಿಳಾ ಟೆನಿಸ್ ಪಂದ್ಯಾವಳಿ; 12 ಭಾರತೀಯ ಟೆನಿಸ್ ಆಟಗಾರ್ತಿಯರು, ಅಂತಿಮ ಸುತ್ತಿಗೆ ಆಯ್ಕೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>